ಸುಮಾರು 40 ಕರಿಒಕ್ಕಲಿಗ ಸಮುದಾಯದ ಕುಟುಂಬಗಳಿವೆ. ಭತ್ತ, ಅಡಿಕೆ, ತೆಂಗು ಕೃಷಿ ಅವರ ಉದ್ಯೋಗ. ಅದರ ಜೊತೆ ಸುಗಂಧ ಭತ್ತವನ್ನು ಬೆಳೆದು ಹೊರಗಿನ ಜನರನ್ನು ಮೇದಿನಿಯತ್ತ ಆಕರ್ಷಿಸುತ್ತಿದ್ದಾರೆ. ಇಲ್ಲಿಯ ಸುಗಂಧ ಭತ್ತದಿಂದ ಮಾಡುವ ಪಾಯಸ, ಕೇಸರಿಬಾತ್ ಬಲು ರುಚಿಕರ. ಬಾಸ್ಮತಿ ಅಕ್ಕಿಗಿಂತ ಇದು ನೈಸರ್ಗಿಕವಾಗಿ ಹೆಚ್ಚು ಪರಿಮಳಯುಕ್ತ. ಆದರೆ ಮೇದಿನಿ ಎಂದರೆ ಸುಗಂಧ ಭತ್ತ, ಅಪರೂಪದ ಕಾಡು, ಜೇನು ಇಷ್ಟೇ ಆಗಿದೆ. ಇವುಗಳಾಚೆಗೆ ಗ್ರಾಮದ ಜನರ ಶಿಕ್ಷಣ, ಆರೋಗ್ಯ, ಕನಿಷ್ಠ ಸೌಲಭ್ಯದತ್ತ ಯಾರಿಗೂ ಲಕ್ಷ್ಯವೇ ಇಲ್ಲದಂತಾಗಿದೆ.

ಕಿರಿಯ ಪ್ರಾಥಮಿಕ ಕನ್ನಡ ಶಾಲೆ, ಆಯುಷ್ಮಾನ್ ಇಲಾಖೆಯ ಪುಟ್ಟ ಆರೋಗ್ಯ ಕೇಂದ್ರ ಬಿಟ್ಟರೆ ಇಲ್ಲಿ ಸರ್ಕಾರದ ಬೇರೆ ಸೌಲಭ್ಯಗಳಿಲ್ಲ. ಹರ ಸಾಹಸದಿಂದ ಮೇದಿನಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದರೂ, ಜೋರಾದ ಗಾಳಿ ಮಳೆಗೆ ವಿದ್ಯುತ್ ತಂತಿ ಮೇಲೆ ಒಂದು ಟೊಂಗೆ ಬಿದ್ದರೆ ಮುಗಿಯಿತು, ತಿಂಗಳುಗಟ್ಟಲೆ ಗ್ರಾಮಕ್ಕೆ ವಿದ್ಯುತ್ ಇರುವುದಿಲ್ಲ. ಅನುಕೂಲಸ್ಥರು ಸೋಲಾರ್ ವಿದ್ಯುತ್ ವ್ಯವಸ್ಥೆಯನ್ನು ತಾವೇ ಕಲ್ಪಿಸಿಕೊಂಡಿದ್ದಾರೆ.

ಮೇದಿನಿ ಗ್ರಾಮಕ್ಕೆ ರಸ್ತೆ ಇಲ್ಲ. ಸುಮಾರು ಏಳು ಕಿಲೊ ಮೀಟರ್‌ಗಳಷ್ಟು ದಟ್ಟ ಕಾಡಿನ ಏರು ದಾರಿ ಮೂಲಕ ಗ್ರಾಮವನ್ನು ತಲುಪಬೇಕು. ಹಿಂದೆ ಗ್ರಾಮಸ್ಥರು ಪಟ್ಟಣಕ್ಕೆ ಬರಲು ಮಾಡಿಕೊಂಡ ಕಾಲುದಾರಿಯೇ ಇಂದು ಊರಿನ ರಸ್ತೆ ಎನಿಸಿಕೊಂಡಿದೆ. ಮಳೆಗಾಲದಲ್ಲಿ ಈ ರಸ್ತೆ ಬೆಟ್ಟದಿಂದ ರಭಸದಲ್ಲಿ ಹರಿದು ಬಂದು ತಳದಲ್ಲಿರುವ ಅಘನಾಶಿನಿ ಸೇರುವ ಬೃಹತ್ ಕಾಲುವೆಯಾಗುತ್ತದೆ. ಮಳೆಗಾಲ ಮುಗಿಯುತ್ತಿದ್ದಂತೆಯೇ ಊರಿನ ಜನರೇ ಶ್ರಮದಾನದ ಪದ್ಧತಿಯಲ್ಲಿ ರಸ್ತೆ ಸರಿಪಡಿಸಿಕೊಂಡು, ಮುಂದಿನ ಮಳೆಗಾಲ ಬರುವವರೆಗೆ ಮತ್ತೆ ಓಡಾಡುತ್ತಾರೆ.


ಶಾಲೆಯ ಕುಸಿದ ಭಾಗ

ಮೇದಿನಿ ಗ್ರಾಮ ಸಂಪರ್ಕಕ್ಕೆ ಸೂಕ್ತ ವಾಹನ ಎಂದರೆ ಬೈಕ್, ಅದು ಬಿಟ್ಟರೆ ಜೀಪು. ವಾಹನ ಇಲ್ಲದವರು ಸಂಬಂಧಿಕರ ಮನೆಗೆ ಹೋಗಬೇಕೆಂದರೆ ಸುಮಾರು ಹತ್ತು ಕಿ.ಮೀ. ಕಾಲುದಾರಿಯಲ್ಲೇ ಸಾಗಬೇಕು. ಅದರಲ್ಲೂ ಏಳು ಕಿ.ಮೀ. ಪೂರ್ತಿ ಏರು ಗುಡ್ಡ. ಮಹಿಳೆಯರು, ವಯಸ್ಸಾದವರು ಅಲ್ಲಲ್ಲಿ ಮರದ ಕೆಳಗೆ ಕೂತು ಸಾವರಿಸಿಕೊಂಡು ಮುಂದೆ ಸಾಗುತ್ತಾರೆ. ಬೈಕ್ ಮೇಲೆ ಸಾಗುವವರು ಬೈಕ್ ಆಚೀಚೆ ನೆಲಕ್ಕೆ ಕಾಲೂರುತ್ತಾ ಮೊದಲ ಗೇರ್‌ನಲ್ಲೇ ನಿಧಾನವಾಗಿ ಗುಡ್ಡ ಏರಬೇಕು. ಕೆಳಗಿಳಿಯುವಾಗ ಅಕಸ್ಮಾತ್ ನಿಯಂತ್ರಣ ತಪ್ಪಿ ಬಿದ್ದರೆ ಬೈಕ್ ಸುಮಾರು ನೂರು ಮೀಟರ್‌ಗಳಷ್ಟು ಜಾರಿಕೊಂಡೇ ಹೋಗುತ್ತದೆ.

ಅಪರೂಪಕ್ಕೊಮ್ಮೆ ಮೇದಿನಿಗೆ ಭೇಟಿ ನೀಡುವ ಶಿಕ್ಷಣ, ಆರೋಗ್ಯ ಇಲಾಖೆ ಅಧಿಕಾರಿಗಳು ಜೀಪಿನಲ್ಲೇ ಸಾಗಬೇಕು. ಗ್ರಾಮದ ಶಾಲೆಯ ಶಿಕ್ಷಕರು ವಾರದ ರಜೆಯಲ್ಲಿ ಮಾತ್ರ ಊರಿಗೆ ಬಂದು, ಉಳಿದ ಆರು ದಿವಸ ಶಾಲೆಯಲ್ಲಿ ವಸತಿ ಹೂಡುತ್ತಾರೆ. ಮತ್ತೆ ಸೋಮವಾರ ಮೇದಿನಿಗೆ ಹೋಗಲು ಊರಿನವರಿಗೆ ಮುಂಚೆಯೇ ತಿಳಿಸಿ ಕುಮಟಾ–ಸಿದ್ದಾಪುರ ರಸ್ತೆಯವರೆಗೆ ಯಾರಾದರೂ ಬೈಕ್ ಸವಾರರನ್ನು ಕರೆಸಿಕೊಳ್ಳಬೇಕಾದ ಪರಿಸ್ಥಿತಿ.

## ಆಸ್ಪತ್ರೆಯೇ ತಾತ್ಕಾಲಿಕ ಶಾಲೆ

ಗ್ರಾಮದ ಶಾಲೆ ಕಳೆದ ವರ್ಷದಿಂದ ಹಂತಹಂತವಾಗಿ ಕುಸಿದು ಈ ವರ್ಷದ ಬಿರುಸು ಮಳೆಗೆ ಕಟ್ಟಡ ಪೂರ್ತಿ ಕುಸಿದು ಶಾಲೆಯ ನಾಮಫಲಕದ ಭಾಗ ಮಾತ್ರ ಉಳಿದುಕೊಂಡಿದೆ. ಶಾಲೆಯ ಪಕ್ಕದಲ್ಲಿಯೇ ಸರ್ಕಾರದ ಆಯುಷ್ಮಾನ್ ಆರೋಗ್ಯಧಾಮದ ಕಟ್ಟಡಕ್ಕೆ ಕಳೆದ ವರ್ಷ ಶಾಲೆಯನ್ನು ಸ್ಥಳಾಂತರ ಮಾಡಲಾಗಿದೆ. ಆಸ್ಪತ್ರೆಗೆ ಯಾರೂ ಬಾರದಿರುವುದರಿಂದ ಆಸ್ಪತ್ರೆ ಕಟ್ಟಡವೇ ತಾತ್ಕಾಲಿಕ ಶಾಲೆಯಾಗಿದೆ. ಈ ವರ್ಷದ ಗಾಳಿ ಮಳೆಗೆ ಶಾಲೆಯ ಬಿಸಿಯೂಟ ಕೋಣೆಯ ಛಾವಣಿ ಹಾರಿ ಹೋಗಿದ್ದರಿಂದ ಬಿಸಿಯೂಟ ಕೋಣೆಯನ್ನೂ ಆಸ್ಪತ್ರೆ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಊರಿನ ಅಂಗನವಾಡಿ ಕಟ್ಟಡ ಕೂಡ ಆಸ್ಪತ್ರೆ ಕಟ್ಟಡದಲ್ಲಿಯೇ ನಡೆಯುತ್ತಿದೆ. ಇಲ್ಲಿ ಅಂಗನವಾಡಿ ಇದ್ದರೆ ಮಾತ್ರ ಶಾಲೆ ಎನ್ನುವಂತಾಗಿದೆ.

ಊರಿನಲ್ಲಿ ಶಾಲೆ ಕಟ್ಟಡ, ಶಿಕ್ಷಕರ ಸಮಸ್ಯೆಯ ಜೊತೆಗೆ ವಿದ್ಯಾರ್ಥಿಗಳ ಸಮಸ್ಯೆಯೂ ಇದೆ. ಸ್ವಲ್ಪ ಅನುಕೂಲಸ್ಥ ಗ್ರಾಮಸ್ಥರು ತಮ್ಮ ಮಕ್ಕಳನ್ನು ಬೆಟ್ಟದ ಕೆಳಗಿನ ಕುಮಟಾದಲ್ಲಿರುವ ಸರ್ಕಾರಿ ವಸತಿ ನಿಲಯದಲ್ಲೋ, ನೆರೆಯ ಸಿದ್ದಾಪುರ ತಾಲ್ಲೂಕಿನ ಸಂಬಂಧಿಕರ ಮನೆಯಲ್ಲೋ ಇಟ್ಟು ಶಿಕ್ಷಣ ಕೊಡಿಸುತ್ತಾರೆ. ಪುಟ್ಟ ಮಕ್ಕಳನ್ನು ಬಿಟ್ಟಿರಲಾರದ ತಂದೆ–ತಾಯಿ ಅವರ ಶಿಕ್ಷಣವನ್ನು ಊರಿನ ಶಾಲೆಯಲ್ಲಿ ಸಿಗುವ ನಾಲ್ಕನೇ ತರಗತಿಗೇ ಅಂತ್ಯಗೊಳಿಸಿಬಿಡುತ್ತಾರೆ.

## ಏನಾಯಿತು ಯೋಜನೆ?

‘ನಮ್ಮ ಪುಟ್ಟ ಮಕ್ಕಳನ್ನು ದೂರದ ಸರ್ಕಾರಿ ಹಾಸ್ಟೆಲಿನಲ್ಲಿ ಇಡಲು ಮನಸೊಪ್ಪುವುದಿಲ್ಲ. ಹಾಗಂತ ನಾವು ತ್ಯಾಗ ಮಾಡದಿದ್ದರೆ ಮಕ್ಕಳ ಶಿಕ್ಷಣಕ್ಕೆ ಕಲ್ಲು ಬೀಳುತ್ತದೆ. ಆದ್ದರಿಂದ ನಮಗೆ ಬದುಕಲು ಕಷ್ಟವಾದರೂ ಊರ ಶಾಲೆಗಾಗಿ ಹೋರಾಡುತ್ತಿದ್ದೇವೆ. ನಮ್ಮ ಊರ ಶಾಲೆಯಲ್ಲಿ ಮೊನ್ನೆಯವರೆಗೆ ಕೆಲಸ ಮಾಡಿದ್ದ ಶಿಕ್ಷಕರೊಬ್ಬರ ಒತ್ತಾಸೆಯಿಂದಾಗಿ ನಾವು ಮಕ್ಕಳನ್ನೂ ಊರ ಶಾಲೆಗೆ ಕಳಿಸುತ್ತಿದ್ದೇವೆ. ಅವರು ಮನೆ ಮನೆಗೆ ತೆರಳಿ ನಮ್ಮ ಮಕ್ಕಳಿಗೆ ಸಾಧ್ಯವಾದಷ್ಟು ಸೌಲಭ್ಯ ಕೊಡಿಸುವ ಭರವಸೆ ನೀಡಿದ್ದರು. ಅವರು ಕುಮಟಾದಿಂದ ಬರುವಾಗ ಹಣ್ಣು, ತಿಂಡಿ ತಂದು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದರು. ಶಾಲೆ ಕುಸಿಯುವ ಅಪಾಯದಲ್ಲಿದ್ದಾಗ ಅವರ ಪ್ರೇರಣೆ ಹಾಗೂ ದಾನಿಗಳ ನೆರವಿನಿಂದ ಶಾಲೆ ಪಕ್ಕದಲ್ಲಿ ಒಂದು ಪುಟ್ಟ ಕುಟೀರ ನಿರ್ಮಿಸಿ ಅಲ್ಲಿ ಶಾಲೆ ಸ್ಥಳಾಂತರಿಸುವ ಉದ್ದೇಶ ಹೊಂದಿದ್ದೆವು. ನಮ್ಮ ಊರಿಗೆ ರಸ್ತೆ ನಿರ್ಮಾಣವಾದರೆ ಹೆಚ್ಚಿನ ಎಲ್ಲ ಸಮಸ್ಯೆ ನಿವಾರಣೆಯಾದಂತೆ’ ಎಂದು ಊರ ಶಾಲೆಯ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಾಲಚಂದ್ರ ಗೌಡ ತಿಳಿಸುತ್ತಾರೆ.

ಮೇದಿನಿ ಗ್ರಾಮದ ರಸ್ತೆ ನಿರ್ಮಾಣಕ್ಕೆ ಕೆಲ ವರ್ಷಗಳ ಹಿಂದೆ ಸ್ಥಳೀಯ ಪಂಚಾಯ್ತಿ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ರೂ. 60 ಕೋಟಿ ಒಂದು ಯೋಜನೆ ತಯಾರಿಸಿ ಸರ್ಕಾರಕ್ಕೆ ಕಳಿಸಿದೆ. ಆದರೆ ಅರಣ್ಯ ಇಲಾಖೆ ಇಲ್ಲಿ ಪಕ್ಕಾ ರಸ್ತೆ ನಿರ್ಮಿಸಲು ಅನುಮತಿ ನೀಡುತ್ತಿಲ್ಲ. ಕೆಲ ತಿಂಗಳ ಹಿಂದೆ ಶಾಲೆಯ ಒಂದು ಹೊಸ ಕೊಠಡಿ ನಿರ್ಮಾಣಕ್ಕೆ ಶಿಕ್ಷಣ ಇಲಾಖೆಯಿಂದ ಹಣ ಮಂಜೂರಾಗಿದೆ. ಸ್ಥಳೀಯ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯವರು ಒಬ್ಬ ತಾತ್ಕಾಲಿಕ ಶಿಕ್ಷಕರನ್ನು ನೀಡಿದ್ದು, ಸದ್ಯ ಊರ ಕನ್ನಡ ಶಾಲೆ ಅಳಿವು–ಉಳಿವಿನ ನಡುವೆ ನಿಂತಿದೆ. ಈ ಶಾಲೆಯನ್ನು ಜೀವಂತವಾಗಿ ಮಕ್ಕಳ ಭವಿಷ್ಯ ಕಟ್ಟುವ ಕೆಲಸ ಸರ್ಕಾರದಿಂದ ಸಾಕಾರವಾಗಬೇಕಿದೆ.

ಪ್ರತಿಕ್ರಿಯಿಸಿ: feedback@sudha.co.in